ಕರ್ನಾಟಕ ಸರ್ಕಾರ

ಸಂಖ್ಯೆ:ಕಕ್ರೀಪ್ರಾ/ಸಿ5/79/2024-25]

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರ ಕಾರ್ಯಾಲಯ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ
ಬೆಂಗಳೂರು -560001
ದಿನಾಂಕ : 13-09-2025

**-: ಅಧಿಸೂಚನೆ :-**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ಕ್ರೀಡಾ ಪ್ರಾಧಿಕಾರವು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆಯಾಗಿರುತ್ತದೆ.

ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ಮಾರ್ಗದರ್ಶನ ನೀಡಲು ಮತ್ತು ಕ್ರೀಡಾ ಮೂಲಭೂತ ಸೌಕರ್ಯಗಳ ಅಭಿವೃದ್ಧಿ / ನಿರ್ವಹಣೆ ಸಂಬಂಧ ನಾಲ್ಕು ವಿಭಾಗಗಳಿಗೆ ತಲಾ ವಿಭಾಗಕ್ಕೆ ಒಬ್ಬರಂತೆ ಮತ್ತು ವಿದ್ಯಾನಗರ ತರಬೇತಿ ಕೇಂದ್ರ ಹಾಗೂ ಕೊಡಿಗೆ ಕ್ರೀಡಾ ಶಾಲೆ ವಸತಿ ನಿಲಯಕ್ಕೆ ಒಬ್ಬರಂತೆ ಒಲಂಪಿಕ್ಸ್‌ನಲ್ಲಿ ಭಾಗವಹಿಸಿದ ಅಥವಾ ಕಾಮನ್‌ವೆಲ್ತ್ ಮತ್ತು ಏಷಿಯನ್ ಗೇಮ್ಸ್ ಗಳಲ್ಲಿ ಭಾಗವಹಿಸಿ ಪದಕ ವಿಜೇತರಾದ ಕ್ರೀಡಾಪಟುಗಳ ಸೇವೆಯನ್ನು ಪಡೆಯಲು ಉದ್ದೇಶಿಸಲಾಗಿದೆ. ಈ ಸಂಬಂಧ ಭಾರತದ ಅರ್ಹ ನಾಗರಿಕರಿಂದ ಅರ್ಜಿಯನ್ನು ಆಹ್ವಾನಿಸಿದೆ.

| **ಕ್ರಮ ಸಂಖ್ಯೆ** | **ಕ್ರೀಡಾ ವಸತಿ ನಿಲಯ** | **ಹುದ್ದೆಗಳ ಸಂಖ್ಯೆ** |
|---|---|---|
| 01 | ಬೆಂಗಳೂರು ನಗರ ವಿಭಾಗ | 01 |
| 02 | ಬೆಳಗಾವಿ ವಿಭಾಗ | 01 |
| 03 | ಕಲ್ಬುರ್ಗಿ ವಿಭಾಗ | 01 |
| 04 | ಮೈಸೂರು ವಿಭಾಗ | 01 |
| 05 | ಕೊಡಿಗೆ ಕ್ರೀಡಾ ಶಾಲೆ-ವಸತಿ ನಿಲಯ | 01 |
| 06 | ವಿದ್ಯಾನಗರ ತರಬೇತಿ ಕೇಂದ್ರ | 01 |

1. **ಅರ್ಹತೆ / ಷರತ್ತುಗಳು :-** 1. ಮಾಸಿಕ ಗೌರವಧನ ಮತ್ತು ಅರ್ಹತೆ ಮಾನದಂಡ ವಿವರಗಳು ಈ ಕೆಳಕಂಡಂತಿದೆ.

| **ಕ್ರಮ ಸಂಖ್ಯೆ** | **ಹುದ್ದೆಗಳ ವಿವರ** | **ಅರ್ಹತಾ ಮಾನದಂಡಗಳು** |
|---|---|---|
| 01 | ಮಾರ್ಗದರ್ಶಕರು 06 | ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿರಬೇಕು ಅಥವಾ ಕಾಮನ್ ವೆಲ್ತ್ ಹಾಗೂ ಏಷಿಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕ ಪಡೆದಿರಬೇಕಾಗಿರುತ್ತದೆ. [ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿದವರಿಗೆ ಮೊದಲ ಆದ್ಯತೆ ನೀಡಲಾಗುವುದು]<br><br>**(ಮಾಸಿಕ ಗೌರವಧನ ತಲಾ ರೂ 1.00 ಲಕ್ಷ ದಿಂದ ರೂ 1.50 ಲಕ್ಷಗಳವರೆಗೆ ನಿಗಧಿಪಡಿಸಲಾಗುವುದು)** |

2. ನೇಮಕಗೊಂಡವರಿಗೆ ಮಾಸಿಕ ಗೌರವಧನ ಮಾತ್ರ ಪಾವತಿಸಲಾಗುವುದು. ಯಾವುದೇ ರೀತಿಯ ವಾರ್ಷಿಕ ವೇತನ ಬಡ್ತಿ, ಪಿಂಚಣಿ ಮತ್ತು ಸರ್ಕಾರಿ ನೌಕರರಿಗೆ ಸಿಗುವ ಇನ್ನಿತರೆ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.
3. ವಿಭಾಗವಾರು ಜಿಲ್ಲೆಗಳ ಪ್ರವಾಸದ ಸಂದರ್ಭದಲ್ಲಿ ನಿಯಮಾನುಸಾರ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹುದ್ದೆಯ ಸಮಾನಾಂತರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.
4. ನೇಮಕಾತಿ ಅವಧಿಯು ಒಂದು ವರ್ಷದವರೆಗೆ ಇರುತ್ತದೆ [ನೇಮಕಾತಿ ಆದೇಶ ನೀಡುವ ದಿನಾಂಕದಿಂದ].
5. ಸರ್ಕಾರದ ಅನುಮೋದನೆ ಮೇರೆಗೆ ಕಾರ್ಯಕ್ಷಮತೆ ಆಧಾರದ ಮೇಲೆ ಮುಂದಿನ ಅವಧಿಗೆ ಸೇವೆ ಪಡೆಯಲಾಗುವುದು.
6. **ಜವಾಬ್ದಾರಿಗಳು:-**

1. ಆಯಾ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿರುವ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ತರಬೇತಿ ವಿಷಯದಲ್ಲಿ ಮಾರ್ಗದರ್ಶನ ನೀಡುವುದು.

2. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಜಿಲ್ಲಾ ಮತ್ತು ತಾಲ್ಲೂಕು ಕ್ರೀಡಾಂಗಣಗಳ ನಿರ್ವಹಣೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಕಾರ್ಯಗಳಲ್ಲಿ ಮಾರ್ಗದರ್ಶನ ನೀಡುವುದು.

3. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಮೇಲಾಧಿಕಾರಿಗಳು ಕ್ರೀಡಾಭಿವೃದ್ಧಿ ಸಂಬಂಧ ಸೂಚಿಸುವ ಇತರೆ ಕಾರ್ಯಗಳು.
4. ಈ ಮೇಲೆ ತಿಳಿಸಿರುವ ಕಾರ್ಯಗಳ ವಿಷಯವಾಗಿ ಕೈಗೊಂಡ ಕ್ರಮದ ಕುರಿತು ಪ್ರಗತಿ ವರದಿಯನ್ನು ಪ್ರತಿ ತಿಂಗಳ ಕೊನೆಯವಾರದಲ್ಲಿ ಜಂಟಿ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರ ಮುಖಾಂತರ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರಿಗೆ ಸಲ್ಲಿಸುವುದು.

## 3. ಸೂಚನೆ :-

–

1. 50 ವರ್ಷ ವಯೋಮಾನದೊಳಗಿನವರು ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.
2. ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ **12-10-2025 ರಂದು ಸಂಜೆ 4.00 ಗಂಟೆಯೊಳಗೆ** ಸಲ್ಲಿಸಬೇಕಾಗಿರುತ್ತದೆ. ಅರ್ಜಿಯನ್ನು ನಿಗಧಿಪಡಿಸಿದ ದಿನಾಂಕದ ನಂತರ ಸ್ವೀಕರಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಒಂದು ವೇಳೆ ನಿಗಧಿಪಡಿಸಲಾದ ಕೊನೆಯ ದಿನಾಂಕವನ್ನು ಸಾರ್ವತ್ರಿಕ ರಜೆಯೆಂದು ಘೋಷಿಸಿದಲ್ಲಿ ಮರುದಿನವನ್ನು ಅಂತಿಮ ದಿನಾಂಕವೆಂದು ಪರಿಗಣಿಸಲಾಗುವುದು.
3. ಅರ್ಹತೆ ಹೊಂದುವ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸಲು **ದಿನಾಂಕ ಸಮಯ ಮತ್ತು ಸ್ಥಳವನ್ನು ಪತ್ರದ ಮೂಲಕ ತಿಳಿಸಲಾಗುವುದು.** ಈ ಸಂದರ್ಭದಲ್ಲಿ ಅರ್ಜಿಯೊಂದಿಗೆ ಸಲ್ಲಿಸಲಾಗಿರುವ ದಾಖಲೆಗಳನ್ನು ನೋಟರಿ ಮಾಡಿಸಿ/ದೃಢೀಕರಿಸಿ ಹಾಜರಾಗಬೇಕಾಗಿರುತ್ತದೆ.
4. ಸಂದರ್ಶನಕ್ಕೆ ಆಹ್ವಾನಿಸದ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಮಾಹಿತಿ / ಹಿಂಬರಹ ನೀಡಲಾಗುವುದಿಲ್ಲ. ಆಯ್ಕೆ ಪ್ರಕ್ರಿಯೆಯಲ್ಲಿ ನಿಗಧಿಪಡಿಸಿರುವ ಅರ್ಹತೆ ಷರತ್ತು ಪೂರೈಸದ ಕಾರಣ ಅಂತಹ ಅಭ್ಯರ್ಥಿಗಳು ಸಂದರ್ಶನಕ್ಕೆ ಆಯ್ಕೆಯಾಗಿರುವುದಿಲ್ಲವೆಂದು ಭಾವಿಸಬೇಕಾಗಿರುತ್ತದೆ. ಈ ಸಂಬಂಧ ಯಾವುದೇ ರೀತಿಯ ಪತ್ರವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
5. ಆಸಕ್ತಿ ಹೊಂದಿರುವವರು ನಿಗಧಿತ ನಮೂನೆಯಲ್ಲಿ ವಿವರವನ್ನು ಭರ್ತಿಮಾಡಿ ಈ ಕೆಳಕಂಡ ದಾಖಲೆಗಳನ್ನು ದೃಢೀಕರಣದೊಂದಿಗೆ ನೋಂದಣಿ ಅಂಚೆ ಮೂಲಕ ಮುಚ್ಚಿದ ಲಕೋಟೆಯಲ್ಲಿ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001 ಇವರಿಗೆ ಸಲ್ಲಿಸಬೇಕಾಗಿರುತ್ತದೆ.

1. ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಸಂಬಂಧ ಅಥವಾ ಕಾಮನ್ ವೆಲ್ತ್ ಹಾಗೂ ಏಷಿಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕ ಪಡೆದಿರುವ ಸಂಬಂಧ ದೃಢೀಕೃತ ಪ್ರಮಾಣ ಪತ್ರದ ಪ್ರತಿ[certificate].
2. ಎಸ್.ಎಸ್.ಎಲ್.ಸಿ ಮತ್ತು ಪದವಿ ಸಂಬಂಧಿಸಿದಂತೆ ಪ್ರಮಾಣ ಪತ್ರಗಳ ಪ್ರತಿ.
3. ಜನನ ಪ್ರಮಾಣ ಪತ್ರ ಅಥವಾ ಎಸ್ಎಸ್ಎಲ್ಸಿ ಪ್ರಮಾಣ ಪತ್ರ
4. ಆಧಾರ ಕಾರ್ಡ್ ಪ್ರತಿ
5. ಭಾವಚಿತ್ರವುಳ್ಳ ಗುರುತಿನ ಚೀಟಿ (ಆಧಾರ್ ಕಾರ್ಡ್ / ಚುನಾವಣಾ ಗುರುತಿನ ಚೀಟಿ / ಪಾಸ್‌ಪೋರ್ಟ್ / ವಾಹನ ಚಾಲನೆ ಪರವಾನಗಿ / ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ನೀಡಿರುವ ಇತರೆ ಗುರುತಿನ ಚೀಟಿ
6. ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರ

6. ಲಕೋಟೆಯ ಮೇಲೆ **"ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ಮಾರ್ಗದರ್ಶನ ನೀಡಲು ಮತ್ತು ಕ್ರೀಡಾ ಮೂಲಭೂತ ಸೌಕರ್ಯಗಳ ಅಭಿವೃದ್ಧಿ / ನಿರ್ವಹಣೆ ಸಂಬಂಧ ಮಾರ್ಗದರ್ಶನ ನೀಡುವ"** ಹುದ್ದೆಯ ನೇಮಕಾತಿ"ಗಾಗಿ ಅರ್ಜಿಯನ್ನು ಸಲ್ಲಿಸಲಾಗುತ್ತಿದೆ ಎಂಬ ಮೇಲು ಬರಹದೊಂದಿಗೆ ಮೊಹರಾದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು.

7. ನಿಗಧಿಪಡಿಸಿರುವ ದಾಖಲೆಗಳು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.

8. ಪೂರ್ಣ ಮತ್ತು ಸಹಿಮಾಡದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.

9. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಮುಂಚಿತವಾಗಿ ಅಧಿಸೂಚನೆಯಲ್ಲಿ ಅರ್ಹತಾ ಮಾನದಂಡಗಳ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಸಂಪೂರ್ಣವಾಗಿ ಅರ್ಹತಾ ಮಾನದಂಡಗಳನ್ನು ಪೂರೈಸಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

10. ಆಸಕ್ತಿ ತೋರುವ ಅರ್ಜಿದಾರರು ರಾಜ್ಯದ ಯಾವುದೇ ಸ್ಥಳದಲ್ಲಿ ಕರ್ತವ್ಯನಿರ್ವಹಿಸಲು ಬದ್ಧರಾಗಿರತಕ್ಕದ್ದು.

11. ಇದು ತಾತ್ಕಾಲಿಕ ಸೇವೆಯಾಗಿದ್ದು ಯಾವುದೇ ಸಂದರ್ಭದಲ್ಲಿ ಖಾಯಂ ಹುದ್ದೆ / ಸೇವೆಯಾಗಿರುವುದಿಲ್ಲ.

12. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಯಾವುದೇ ಕಾರಣ ನೀಡದೆ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

13. ಅರ್ಜಿಗೆ ಯಾವುದೇ ಶುಲ್ಕವಿರುವುದಿಲ್ಲ.

14. ಅಭ್ಯರ್ಥಿಗಳ ಆಯ್ಕೆಯನ್ನು ಈ ವಿಷಯವಾಗಿ ರಚಿಸಲಾಗಿರುವ ಆಯ್ಕೆ ಸಮಿತಿಯು ನಿರ್ವಹಿಸುತ್ತದೆ. ಅಂತಿಮವಾಗಿ ಆಯ್ಕೆ ಪ್ರಕ್ರಿಯೆಯು ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರ ವಿವೇಚನೆಗೆ ಒಳಪಟ್ಟಿರುತ್ತದೆ.

15. ಅಭ್ಯರ್ಥಿಗಳ ಅರ್ಹತಾ ಮಾನದಂಡಗಳ ವಿಷಯವಾಗಿ, ಅಭ್ಯರ್ಥಿಗಳ ಆಯ್ಕೆ ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳ ಸ್ಥಳ ನಿಯೋಜನೆ ಸಂಬಂಧವಾಗಿ ಮಹಾನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರ ನಿರ್ಧಾರವೇ ಅಂತಿಮವಾಗಿರುತ್ತದೆ.

16. ನೇಮಕಾತಿಯಾದ ನಂತರ ಹಾಗೂ ಸಂದರ್ಭಾನುಸಾರ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರು ಅಭ್ಯರ್ಥಿಗಳನ್ನು ರಾಜ್ಯದ ಯಾವುದೇ ಸ್ಥಳಕ್ಕೆ ನಿಯುಕ್ತಿಗೊಳಿಸುವ ಅಧಿಕಾರವನ್ನು ಹೊಂದಿದ್ದು, ಇವರ ನಿರ್ಧಾರವೇ ಅಂತಿಮವಾಗಿರುತ್ತದೆ. ಈ ಸಂಬಂಧ ಆಯ್ಕೆಗೊಂಡ ಎಲ್ಲಾ ಅಭ್ಯರ್ಥಿಗಳು ಈ ನಿರ್ಧಾರಕ್ಕೆ ಬದ್ಧರಾಗಿರತಕ್ಕದ್ದು. ಆದ್ದರಿಂದ ಯಾವುದೇ ಸ್ಥಳದಲ್ಲಿ ಕಾರ್ಯನಿರ್ವಹಿಸಲು ಸಿದ್ಧರಿರುವ ಅಭ್ಯರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು.

17. ಈ ನೇಮಕಾತಿ ಮತ್ತು ಸ್ಥಳ ನಿಯೋಜನೆ ತಾತ್ಕಾಲಿಕವಾಗಿದ್ದು, ಮುಂದಿನ ಆದೇಶಗಳಿಗೆ ಒಳಪಟ್ಟಿರುತ್ತದೆ.

18. ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರು ಈ ನೇಮಕಾತಿ ಅಧಿಸೂಚನೆಯನ್ನು ರದ್ದುಪಡಿಸುವ ಮತ್ತು ಯಾವುದೇ ಸಂದರ್ಭದಲ್ಲಿ ಆಯ್ಕೆಪ್ರಕ್ರಿಯೆಯನ್ನು ಯಾವುದೇ ಕಾರಣ ನೀಡದೆ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

19. ಆಯ್ಕೆಗೊಂಡ ಅಭ್ಯರ್ಥಿಗಳು ರೂ 100.00 ಛಾಪಾ ಕಾಗದದಲ್ಲಿ ನೇಮಕಾತಿ ಮತ್ತು ಸ್ಥಳ ನಿಯೋಜನೆ, ಇನ್ನಿತರೆ ವಿಷಯದ ಸಂಬಂಧವಾಗಿ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರ ವಿರುದ್ಧವಾಗಿ ನ್ಯಾಯಾಲಯದಲ್ಲಿ ದಾವೆ ಹೂಡುವುದಿಲ್ಲ ಎಂದು ಮುಚ್ಚಳಿಕೆಯನ್ನು ಸಹಿಮಾಡಿ ಸಲ್ಲಿಸತಕ್ಕದ್ದು.

20. ನಕರಾತ್ಮಕವಾಗಿ ಪ್ರಚಾರಮಾಡುವ ಅಭ್ಯರ್ಥಿಗಳ ಅರ್ಜಿಯನ್ನು ಅಥವಾ ನೇಮಕಾತಿಯನ್ನು ಅನರ್ಹಗೊಳಿಸಲಾಗುವುದು.

Digitally signed by
CHETHAN R
Date: 13-09-2025
15:54:49

**ಆಯುಕ್ತರು**
**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ**
**ಹಾಗೂ ಮಹಾ ನಿರ್ದೇಶಕರು**
**ಕರ್ನಾಟಕ ಕ್ರೀಡಾ ಪ್ರಾಧಿಕಾರ**

Sports authority of Karnataka

Application for the post of _______

-

| Candidate Aadhar No. | | | | | | | | | | | | |
|---|---|---|---|---|---|---|---|---|---|---|---|---|

01. Candidate's Name (IN CAPITAL LETTERS). Please keep one box blank between name, middle name and surname)

| | | | | | | | | | | | | | | |
|---|---|---|---|---|---|---|---|---|---|---|---|---|---|---|
| | | | | | | | | | | | | | | |

02. Father's/ Husband's Name (IN CAPITAL LETTER). Please keep one box blank between name, middle name and surname.

| | | | | | | | | | | | | | | |
|---|---|---|---|---|---|---|---|---|---|---|---|---|---|---|

03.

| Date of Birth | | | | | | | | | 04. | Age as on 01-09-2025 | | | |
|---|---|---|---|---|---|---|---|---|---|---|---|---|---|
| | Days | | Month | | Year | | | | | | Days | Month | Year |

05.

| Category | please mark (√ tick) |
|---|---|

| 06. | please mark (√ tick) |
|---|---|

| | | | |
|---|---|---|---|
| Gen | OBC | SC | ST |
| | | | |
| | | | |

| Details | Discipline | Tick |
|---|---|---|
| Olympic Games [Participation] | | |
| Commonwealth games Medal Winners] | | |
| Asian Games [Medal winners] | | |

07. currently working

| [write : | Yes | | No | |
|---|---|---|---|---|

8. Gender (√ tick)

| Male | | Female | |
|---|---|---|---|

If Yes:

| Sector | Period of service / experience |
|---|---|
| Government /DYES | |
| Private | |
| | |

09. Candidate's address for communication (In capital Letters)

| |
|---|
| Address ........................................................................................................................ .... |
| |

| |
|---|
| ………………………………………………………………………………………………………………………… … |
| ………………………………………………………………………………………….Pin code ……………. …… |

Contact : Tel No. (with STD code) ……………………………………………………………………………….

Mobile No : ……………………………………………………………………………………………………….

E-Mail ID …………………………………………………………………………………………………………

10. If medallist in Asian Games / Commonwealth Games or Participation in Olympics furnish details in the following table.

| Participation In Olympic Games | Commonwealth Games (Medal Winner) | | | | Asian Games (Medal winner) | | | |
|---|---|---|---|---|---|---|---|---|
| --- | Year | Gold | Silver | Bronze | Year | Gold | Silver | Bronze |
| | | | | | | | | |

11. Whether any inquiry, investigation, case, department or other proceeding in relation to any official case of criminal offence or allegation of moral turpitude have been initiated / pending and or the applicant has been convicted / held guilty by any court or Authority in this behalf . Yes / No.

12. Professional Qualification :

| Sl No. | Qualification | University | Marks obtained | Remarks |
|---|---|---|---|---|
| 1 | | | | |
| 2 | | | | |
| 2 | | | | |

13. Any other achievement & particulars. If any (self / student)

**Self-Declaration**

I do hereby declare that all statement made in this application are true and correct to the best of my knowledge and belief. I understand and accepted that in the event of any information being found false or incorrect or not satisfying the prescribed eligibility criteria for the post applied for my candidature is liable to be cancelled / rejected at any stage of selection.

Place :

Date:
(Signature of the applicant)